**2** ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ**,** ಪಾಂಡವಪುರ

ಸಿ**.**ಸಿ**.**ಸಂಃ **569/2022**

ಕರ್ನಾಟಕ ರಾಜ್ಯದ ಪರವಾಗಿ
ಪೊಲೀಸರು ನಿರೀಕ್ಷಕರು
ಪಾಂಡವಪುರ ಪೊಲೀಸ್ ಠಾಣೆ **-** ಪಿರ್ಯಾದಿದಾರರು

- ವಿರುದ್ಧ -

1) ದೇವರಾಜು ಮತ್ತು ಇತರರು
\- ಆರೋಪಿಗಳು

ಶ್ರೀಮತಿ ಪದ್ಮ ಎಂ**,** ಬಿ**.**ಎ**.,** ಎಲ್**.**ಎಲ್**.**ಬಿ**.** 2 ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪಾಂಡವಪುರ ಆದ ನಾನು**,**

1) ದೇವರಾಜು ಬಿನ್ ಚಲುವಯ್ಯ, 22 ವರ್ಷ,
2) ಅಪ್ಪಿ ಬಿನ್ ಲೇಟ್ ವಿಷಕಂಠಯ್ಯ, 38 ವರ್ಷ,
3) ಕಿರಣ ಬಿನ್ ಲೇಟ್ ನರಸಿಂಹ, 21 ವರ್ಷ,
4) ಗಿರೀಶ ಬಿನ್ ವೈರಮುಡಿ, 27 ವರ್ಷ,
5) ನಾಗೇಶ ಬಿನ್ ವೆಂಕಟಯ್ಯ, 30 ವರ್ಷ,
6) ಭರತ – ಮೃತ

ಎಲ್ಲರೂ ವಾಸಃ ಶಾಂತಿನಗರ,
ಪಾಂಡವಪುರ ಟೌನ್, ಮಂಡ್ಯ ಜಿಲ್ಲೆ.

ನಿಮ್ಮಗಳ ಮೇಲೆ ಹೊರಿಸುವ ಆರೋಪಣೆ ಏನೆಂದರೆಃ**-**

ದೋಷಾರೋಪಣೆ

ಮೊದಲನೆಯದಾಗಿಃ ದಿನಾಂಕಃ **23.06.2021** ರಂದು ರಾತ್ರಿ **8.30** ಗಂಟೆ ಸಮಯದಲ್ಲಿ ಪಾಂಡವಪುರ ಪೋಲೀಸ್ ಠಾಣಾ ಸರಹದ್ದಿನ ಪಾಂಡವಪುರ ಟೌನ್‌ನ ಶಾಂತಿನಗರದ ಅಫಿಷಿಯಲ್ ಕ್ಲಬ್‌ನ ಮುಂಭಾಗದ ರಸ್ತೆಯಲ್ಲಿ ಚಾಸಾ **2** ರವರು ಮೋಟಾರ್ ಸೈಕಲ್ಲಿನಲ್ಲಿ ಹೋಗುತ್ತಿದ್ದಾಗ **1** ರಿಂದ **5** ನೇ ಆರೋಪಿತರಾದ ನೀವುಗಳು ಮೃತ **6** ನೇ ಆರೋಪಿತನೊಂದಿಗೆ ಅಕ್ರಮಕೂಟ ಕಟ್ಟಿಕೊಂಡು ಅಕ್ರಮಕೂಟದ ಉದ್ದೇಶದಂತೆ ಗುಂಪುಕಟ್ಟಿಕೊಂಡು ಬಂದಿರುತ್ತೀರಿ ಎಂದು ಆ ಕಾರಣ

ಭಾರತೀಯ ದಂಡ ಸಂಹಿತೆ ಕಲಂ **143** ಸಹವಾಚಕ ಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ಎರಡನೆಯದಾಗಿಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ **1** ರಿಂದ **5** ನೇ ಆರೋಪಿತರಾದ ನೀವುಗಳು ಮೃತ **6** ನೇ ಆರೋಪಿತನೊಂದಿಗೆ ಅಕ್ರಮಕೂಟ ಕಟ್ಟಿಕೊಂಡು ಅಕ್ರಮಕೂಟದ ಉದ್ದೇಶದಂತೆ ಹಳೇ ದ್ವೇಷದಿಂದ ಚಾಸಾ **2** ರವರನ್ನು ರಸ್ತೆಯಲ್ಲಿ ಮುಂದೆ ಹೋಗದಂತೆ ತಡೆದು ನಿಲ್ಲಿಸಿರುತ್ತೀರಿ ಎಂದು ಆ ಕಾರಣ ಭಾರತೀಯ ದಂಡ ಸಂಹಿತೆ ಕಲಂ **341** ಸಹವಾಚಕ ಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ಮೂರನೆಯದಾಗಿಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ **1** ರಿಂದ **5** ನೇ ಆರೋಪಿತರಾದ ನೀವುಗಳು ಮೃತ **6** ನೇ ಆರೋಪಿತನೊಂದಿಗೆ ಅಕ್ರಮಕೂಟ ಕಟ್ಟಿಕೊಂಡು ಅಕ್ರಮಕೂಟದ ಉದ್ದೇಶದಂತೆ ಚಾಸಾ **2** ರವರನ್ನು ಬೈಕಿನಿಂದ ಕೆಳಕ್ಕೆ ಎಳೆದುಕೊಂಡು, ಲೋ ಸೂಳೆ ಮಗನೇ, ನೀನು ಒಂಟಿಯಾಗಿ ಸಿಗುವುದನ್ನು ಕಾಯುತ್ತಿದ್ದೋ, ಲೋಫರ್ ನನ್ ಮಗನೇ, ಈ ದಿನ ನಿನ್ನ ಆಯಸ್ಸು ಮುಗಿಯಿತು ಇಲ್ಲಿಗೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ ಎಂದು ಆ ಕಾರಣ ಭಾರತೀಯ ದಂಡ ಸಂಹಿತೆ ಕಲಂ **504** ಸಹವಾಚಕ ಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ನಾಲ್ಕನೆಯದಾಗಿಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ **1** ರಿಂದ **5** ನೇ ಆರೋಪಿತರಾದ ನೀವುಗಳು ಮೃತ **6** ನೇ ಆರೋಪಿತನೊಂದಿಗೆ ಅಕ್ರಮಕೂಟ ಕಟ್ಟಿಕೊಂಡು ಅಕ್ರಮಕೂಟದ ಉದ್ದೇಶದಂತೆ ಚಾಸಾ **1** ರವರ ಕತ್ತಿನ ಪಟ್ಟಿಯನ್ನು ಹಿಡಿದು ಕೆಳಕ್ಕೆ ಕೆಡವಿಕೊಂಡು ಚಾಸಾ **1** ರವರ ಹೊಟ್ಟೆಯ ಭಾಗಕ್ಕೆ ಕಾಲುಗಳಿಂದ ತುಳಿದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ ಎಂದು ಆ ಕಾರಣ ಭಾರತೀಯ ದಂಡ ಸಂಹಿತೆ ಕಲಂ **323** ಸಹವಾಚಕ ಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ಕೊನೆಯದಾಗಿಃ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ **1** ರಿಂದ **5** ನೇ ಆರೋಪಿತರಾದ ನೀವುಗಳು ಮೃತ **6** ನೇ ಆರೋಪಿತನೊಂದಿಗೆ ಅಕ್ರಮಕೂಟ ಕಟ್ಟಿಕೊಂಡು ಅಕ್ರಮಕೂಟದ ಉದ್ದೇಶದಂತೆ ಚಾಸಾ **2** ರವರಿಗೆ ನಿನ್ನನ್ನು ಕೊಂದು ನಿನ್ನ ವಂಶವನ್ನು ನಿರ್ವಂಶ ಮಾಡುತ್ತೇವೆಂದು ಪ್ರಾಣ ಬೆದರಿಕೆ ಹಾಕಿರುತ್ತೀರಿ ಎಂದು ಆ ಕಾರಣ ಭಾರತೀಯ ದಂಡ ಸಂಹಿತೆ

ಕಲಂ **506** ಸಹವಾಚಕ ಕಲಂ **149** ರಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.

ಮೇಲೆ ಹೇಳಿದ ದೋಷಾರೋಪಣೆಗೆ ವಿಚಾರಣೆಗೊಳಪಡಬೇಕಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರ: ಕನ್ನಡದಲ್ಲಿ ಓದಿ ಹೇಳಲಾದ ದೋಷಾರೋಪಣೆಗಳು ಅರ್ಥವಾಯಿತಾ?

ಉಃ

ಆ – **1**

ಆ – **2**

ಆ – **3**

ಆ – **4**

ಆ – **5**

ಪ್ರ: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉಃ

ಆ – **1**

ಆ – **2**

ಆ – **3**

ಆ – **4**

ಆ – **5**

ಮೇಲ್ಕಂಡ ದೋಷಾರೋಪಣೆಯನ್ನು ಕನ್ನಡದಲ್ಲಿ ಓದಿ ಹೇಳಲಾಗಿದ್ದು, ಆರೋಪಿತರು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.

**2** ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ**,**
ಪಾಂಡವಪುರ**.**

ದಿನಾಂಕಃ **26.03.2024**
ಸ್ಥಳಃ ಪಾಂಡವಪುರ

ಆರೋಪಿತರ ಸಹಿಃ

ಆ – **1**

ಆ – **2**

ಆ – **3**

ಆ – **4**

ಆ – **5**